ಆ) ಹಾಗಿದ್ದಲ್ಲಿ ಅನುಮತಿ ನೀಡಬೇಕಾದಲ್ಲಿ ಅನುಸರಿಸಬೇಕಾಗಿರುವ ನಿಯಮ ಹಾಗೂ ನಿಬಂಧನೆಗಳೇನು?

ಇ) ಮಂಡ್ಯ ನಗರದಲ್ಲಿ ಈ ಪಾಲಿಸಿ ಅನ್ವಯ ಎಷ್ಟು ಮಳಿಗೆಗಳಿಗೆ ಪರವಾನಿಗೆ ನೀಡಲಾಗಿದೆ?

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು):

ಅ) ಹೌದು.

ಆ) ಸರ್ಕಾರದಿಂದ ಅನುಮೋದಿತ ಸ್ಥೂಲಾಭಿವೃದ್ಧಿ ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿನ ವಲಯ ನಿಯಮಾವಳಿಗಳು

ಇ) 13 ಪ್ರಕರಣಗಳು.

ರೇಷ್ಮೆ ಸಂಪತ್ತು ಯೋಜನೆ.

1923(2638)

ಶ್ರೀ ಎಂ.ಎಸ್.ಆತ್ಮಾನಂದ(ಮಂಡ್ಯ): ಎಂ.ಮಹದೇವ್ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೇಷ್ಮೆ ಸಂಪತ್ತು ಜಾರಿಯಲ್ಲಿದೆಯೇ?

ಆ) ಯಾವ ಯಾವ ಜಿಲ್ಲೆ ಈ ಯೋಜನೆಯ ವ್ಯಾಪ್ತಿಗೊಳಪಟ್ಟಿದೆ?

ಶ್ರೀ ಎಂ.ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಯೋಜನೆ ಜಾರಿಗೆ ಬಂದ ನಂತರ ವಿವರಗಳು ಲಭ್ಯವಾಗುವುವು.

ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಹಾಯ ಧನ ಬಿಡುಗಡೆ.

1924(2642)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೋದ್ಯಮಿಗಳಿಗೆ ಬಾಕಿ ನೀಡಬೇಕಾದ ಸಹಾಯಧನದ ಮೊತ್ತವೆಷ್ಟು?

ಆ) ಈ ಬಾಕಿ ನೀಡಬೇಕಾದ ಸಹಾಯಧನವನ್ನು ಎಂದು ಬಿಡುಗಡೆ ಆಗುವುದು?

ಶ್ರೀ ಎಸ್.ಆರ್.ಕಾಶಪ್ಪನವರ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):

ಅ) ರಾಜ್ಯದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ 31.3.2001ರ ಅಂತ್ಯಕ್ಕೆ ಸುಮಾರು ರೂ.338.57 ಕೋಟಿ ಸಹಾಯಧನ ನೀಡಲು ಬಾಕಿ ಇರುತ್ತದೆ. ಇದರಲ್ಲಿ ರೂ.10.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನು ಬಾಕಿ ರೂ.328.57 ಕೋಟಿಗಳನ್ನು ಬಿಡುಗಡೆ ಮಾಡಬೇಕಾಗಿದೆ.

ಆ) 2001-02ನೇ ಆರ್ಥಿಕ ಸಾಲಿನಲ್ಲಿ ಆಯವ್ಯಯದಲ್ಲಿ ರೂ.25.00 ಕೋಟಿಗಳನ್ನು ಸಣ್ಣ ಕೈಗಾರಿಕೆಗಳಿಗೆ ಸಹಾಯಧನ ಬಿಡುಗಡೆಗಾಗಿ ಅನುದಾನವನ್ನು ಒದಗಿಸಲಾಗಿದೆ. ಈಗಾಗಲೇ ರೂ.10.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಉಳಿದ ರೂ.15.00 ಕೋಟಿಗಳನ್ನು ಶೀಘ್ರವೇ ಬಿಡುಗಡೆ ಮಾಡಲಾಗುವುದು ಮತ್ತು ಪೂರ್ಣ ಸಹಾಯಧನ ಬಿಡುಗಡೆ ಮಾಡಲು ವಿಶೇಷ ಪ್ರಯತ್ನ ಮಾಡಲಾಗುತ್ತಿದೆ.

ರೇಷ್ಮೆ ಕಾಯಿದೆ ಪರಿಷ್ಕರಿಸುವುದು.

1925(2644)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಕಾಯಿದೆಯನ್ನು ಪರಿಷ್ಕರಿಸಲಾಗುತ್ತಾ ಇದೆಯೇ?

ಆ) ಹಾಗಿದ್ದಲ್ಲಿ ಇದರ ವಿವರಗಳೇನು?

ಶ್ರೀ ಎಂ.ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ರಾಜ್ಯದ ರೇಷ್ಮೆ ಕೃಷಿಯಲ್ಲಿ ಉದ್ಯಮದ ಸಮಗ್ರ ಅಭಿವೃದ್ಧಿಯ ಹಿನ್ನೆಲೆಯಲ್ಲಿ